ತುಮಕೂರು ಡಿಸ್ಟ್ರಿಕ್ಟು.

ಸಕ್ರ 1908ನೆ ಇಸವಿ ಡಿಸೆಂಬರ್ 3ನೆ ತಾರೀಖಿನಲ್ಲಿ ತುಮಕೂರು ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳು ನಡೆಸಿದ ಮೀಟಿಂಗಿನ ಪ್ರೊಸೀಡಿಂಗ್ಸು.

ನಂಬರ್.	ಹೆಸರು.	ಹಾಜರ್.	ಗೈರಹಾಜರ್.
	ಕೆ. ದೊರಸ್ವಾಮಿ ಐಯ್ಯರ್, ಎಸ್‌ಕ್ವಯರ್, ಪ್ರೆಸಿಡೆಂಟರವರು.	ಹಾಜರ್.	...
	ಎಕ್ಸ್ ಅಫಿಷಿಯೊ ಮೆಂಬರುಗಳು.		
1	ಮಿ|| ಸಿ. ವೆಂಕಟರಾಯರು, ಬಿ. ಎ., ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು ಮತ್ತು ಬೋರ್ಡು ವೈಸ್ ಪ್ರೆಸಿಡೆಂಟರವರು.	ಡಿಟೋ	...
2	,, ವಿ. ಆರ್. ತ್ಯಾಗರಾಜ ಐಯ್ಯರ್ ಯವರು, ಎಂ. ಎ., ಮದ್ದಗಿರಿ ಸಬ್ ಡಿವಿಜ್ ಆಫಿಸರವರು.	ಡಿಟೋ	...
3	,, ಎಂ. ಎ. ನಾರಾಯಣ ಅಯ್ಯಂಗಾರ್ಯವರು, ಬಿ. ಎ., ಬಿ. ಎಲ್., ಗುಬ್ಬಿ ಸಬ್ ಡಿವಿಜ್ ಆಫಿಸರವರು.	ಡಿಟೋ	...
4	,, ಕೆ. ಪ್ರಹ್ಲಾದರಾಯರವರು, ತುಮಕೂರು ಡಿವಿಜ್ ಎಸ್ಸಿಕ್ಯೂಟಿವ್ ಇಂಜನಿಯರ್‌ರವರು.	ಡಿಟೋ	...
5	,, ಎಸ್. ರಂಗಾಚಾರ್ಯರವರು, ತುಮಕೂರು ಡಿಸ್ಟ್ರಿಕ್ಟು ಸ್ಕೂಲ್‌ಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು.	ಡಿಟೋ	...
6	,, ಸಿ. ಅಪ್ಪಾಧೊರ ಮೊದಲಿಯಾರ್‌ರವರು, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.	...	ಗೈರ್ ಹಾಜರ್.
	ನಾರ್ಮ್ ಅಫಿಷಿಯಲ್ ಮೆಂಬರುಗಳು.		
1	ಮಿ|| ವೈಲಾರಪ್ಪ ಬಿ ಕೆಂಚಪ್ಪನವರು, ತುಮಕೂರು ...	ಹಾಜರ್.	...
2	,, ಕೆ. ರಾಮಾನುಜೈಯ್ಯಂಗಾರ್, ಗುಬ್ಬಿ	ಡಿಟೋ	...
3	,, ವೀರಶೆಟ್ಟರು, ತುರುವೇಕೆರೆ	ಡಿಟೋ	...
4	,, ಗಂಗಗೌಡರು, ಚಿಕ್ಕನಾಯಕನಹಳ್ಳಿ	...	ಗೈರ್ ಹಾಜರ್.
5	,, ಕೆ. ಬಿ. ಶ್ರೀನಿವಾಸರಾವ್, ಮದ್ದಗಿರಿ	ಹಾಜರ್.	...
6	,, ಆಬಿದಲ್ಲಿ ಸಾಹೇಬರು, ಕೊರಟಗೆರೆ	ಡಿಟೋ	...
7	,, ಶಿಂಗ್ರಿ ನಂಜಪ್ಪನವರು, ತಿಪಟೂರು	ಡಿಟೋ	....
8	,, ಹೇರೂರು ಗುಂಡಪ್ಪನವರು, ಕುಣಿಗಲ್	ಡಿಟೋ	...
9	,, ಅಗಳೀ ವೆಂಕಟರಾಮೈಯ್ಯನವರು, ಶಿರಾ	ಡಿಟೋ	...
10	,, ಸಿ. ಶ್ರೀನಿವಾಸರಾಯರು, ಪಾವಗಡ	ಡಿಟೋ	...
11	,, ಆದೆಪ್ಪ ಬಿ ಅಪ್ಪಂಣಕೆಟ್ಟು, ತುಮಕೂರು	ಡಿಟೋ	...
12	,, ಸೂರ್ಯನಾರಾಯಣರಾವ್ ಬಿ ಮಲ್ಲಪ್ಪನವರು, ಕೋಳಾಲ ...	ಡಿಟೋ	...
13	,, ಕಂಭುಲಿಂಗ ಶೆಟ್ಟರು, ಗುಬ್ಬಿ	...	ಗೈರ್ ಹಾಜರ್.
14	,, ಹೊನ್ನಲಿಗೆ ಗೌಡರು, ಗುಬ್ಬಿ	ಹಾಜರ್.	ಡಿಟೋ
15	,, ಬಿ. ಶಿವರಾಮೈಯ್ಯನವರು, ಮದ್ದಗಿರಿ	ಡಿಟೋ	...
16	,, ಆಂಜನೇಯ ಶೆಟ್ಟರು, ಪಾವಗಡ	ಡಿಟೋ	...
17	,, ಶಿಂಗ್ರಾಚಾರ್ರು, ಕುಣಿಗಲ್	ಡಿಟೋ	...
18	,, ಹೊನ್ನವಳ್ಳಿ ಕಂದಾಚಾರ್ ಸುಬ್ಬರಾಯರು, ತಿಪಟೂರು ...	ಡಿಟೋ	...

ಈ ಕೆಳಗೆ ನಮೂದಿಸಿರುವ ತಾಲ್ಲೂಕುಗಳ ಅಮಲ್ದಾರ್ರುಗಳು ಮತ್ತು ಡೆಪ್ಯುಟಿ ಅಮಲ್ದಾರ್ರು ಸಹಾ ಹಾಜರಿದ್ದರು:—

(1) ತುಮಕೂರು ತಾಲ್ಲೂಕು ಅಮಲ್ದಾರ್ರು.
(2) ಮದ್ದಗಿರಿ ಡಿಟೋ.
(3) ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಅಮಲ್ದಾರ್ರು.
(4) ಶಿರಾ ಡಿಟೋ
(5) ಪಾವಗಡ ಡಿಟೋ
(6) ತಿಪಟೂರು ಡಿಟೋ
(7) ಗುಬ್ಬಿ ಡಿಟೋ
(8) ಕುಣಿಗಲ್ ಡಿಟೋ
(9) ತುರುವೇಕೆರೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು.

I. ಇರಿಗೇಷನ್ ಸೆಸ್ಸ್ ಫಂಡ್ ವಿಲೇವಾರಿ ಮತ್ತು ಅದರ ಸಂಬಂಧದಲ್ಲಿ ಅಂದಾಜುಗಳು ತಯಾರಾಗತಕ್ಕ ಭಾಗದಲ್ಲಿ ರೂಲ್ಸ್‌ಗಳು ವಿಧಾಯಕವಾಗಿರುವ 24—9—08ನೆ ಮರ್ಕುಂ 2086-96—L. R. 585-07-11ನೆ ನಂಬರ್ ಗೌರ್ನಮೆಂಟ್ ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

II. ಹೊಳಲಕೆರೆ ತಾಲ್ಲೂಕು ಕೊಡಗವಳ್ಳಿ ಗ್ರಾಮಸ್ಥರಿಗೆ ಮತ್ತು ಇತರರಿಗೆ ಅಮೃತಮಹಲ್ ಗೂಳಿಗಳು ಸರಬರಾಯಿ ಆಗತಕ್ಕ ಬಾಬ್ತಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರು ಬರಸಿದ ಪ್ರಪೋಜಲ್ ಮಂಜೂರ್ಮಾಡಿರುವದಾಗಿ ನಮೂದಾದ 11—11—08ನೆ ಮರ್ಕುಂ 4409-18—L. R. 85-08-4ನೆ ನಂಬರು ಗೌರ್ನಮೆಂಟ್ ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

III. ಚಾಣಸಂದ್ರದ ರೈಲ್ವೆ ಸ್ಟೇಷನ್‌ಬಳಿ ಬಂದು ಟೋಲ್‌ಗೇಟ್ ಸ್ಥಾಪಿಸತಕ್ಕ ಬಾಬ್ತಿ ಗುಬ್ಬಿ ಸಬ್ ಡಿವೀಜ್ ಆಫಿಸರವರ 22—10—08ನೆ ಮರ್ಕುಂ 260ನೆ ನಂಬರು ಯಾದಿ ಓದಲಾಯಿತು.

ಕರಾಕುರ್ಚಿ ವ್ಯಾಂಗನೀಸ್ ಗಣಿ ಮತ್ತು ಬೆಳ್ಳಾರದ ಭಂಗಾರದ ಗಣಿ ಕೆಲಸ ನಿಂತುಹೋದ್ದರಿಂದ ನಿರೀಕ್ಷಣೆಗೆ ವಿರೋಧವಾಗಿ ಆಮದರಫ್ತು ಬಹಳವಟ್ಟಿಗೆ ಕಡಮೆ ಆಗಿರುತ್ತೆ. ಈ ಕಾರಣದಿಂದ ಅಲ್ಲಿ ಟೋಲ್‌ಗೇಟ್ ಇಡುವದರಿಂದ ಲವಾಜವೂ ಖರ್ಚಿಗೇನೇ ಸಾಕುಸಾಲದಷ್ಟು ಉತ್ಪತ್ತಿ ಆಗಬಹುದೆಂತ ಬೋರ್ಡಿನವರು ಅಭಿಪ್ರಾಯಪಡುತ್ತಾರಾದ್ದರಿಂದ ಅಲ್ಲಿ ಟೋಲ್‌ಗೇಟ್ ಸ್ಥಾಪಿಸುವುದು ಮನ್ನಾ ಮಾಡಬೇಕಾಗಿ ತೀರ್ಮಾನಿಸಲಾಯಿತು.

IV. ಮದ್ದಗಿರಿ ತಾಲ್ಲೂಕು ಮಿಡಗೇಶಿಬಳಿ ಇರುವ ಹಾಲಿ ವಡದುಹೋಗಿರುವ ಸನ್ಯಾಸಿ ಕಟ್ಟೆಯನ್ನು ದುರಸ್ತುಪಡಿಸಲು ತಯಾರಾದ 1,668 ರೂಪಾಯಿಗಳ ಅಂದಾಜು ತುಮಕೂರು ಡಿವಿಜ್ ಎಗ್ಜಿಕ್ಯುಟಿವ್ ಇಂಜನಿಯರ್‌ಯವರ 23-11-08ನೆ ಮರ್ಕುಂ 310ನೆ ನಂಬರು ಡಾಕೆಟ್‌ಯೊಡನೆ ತಲ್ಪಿದ್ದನ್ನು ಓದಲಾಯಿತು.

ನೀರಿನ ತುಟಾರೆ ಸಂಭವಿಸುವ ಮಿಡಗೇಶಿಬಳಿ ನೀರಿನ ಸೌಕರ್ಯ ಉಂಟುಮಾಡುವದಕ್ಕೂ ಮತ್ತು ಆ ಪ್ರಾಂತ್ಯದ ಭಾವಿಗಳು ಬತ್ತಿಹೋಗದಂತೆ ವಿಚಾರಿಡು ಆಗುವದಕ್ಕೂ ಸಹಾ ಈ ಕಟ್ಟೆಯನ್ನು ದುರಸ್ತು ಮಾಡಿಸುವದು ಅವಶ್ಯಕವಾಗಿ ಜರೂರಿಯಾತ್ ಆದ್ದಾಗಿರುತ್ತೆಂತಲೂ ಎಗ್ಜಿಕ್ಯೂಟಿವ್ ಇಂಜನಿಯರ್ ಯವರಿಂದ ತಯಾರಾದ ಅಂದಾಜು ಪ್ರಕಾರ ಈ ಕಟ್ಟೆ ದುರಸ್ತಿಗಾಗಿ ತಗಲುವ ಲಾಗೋಡು 1,668 ರೂಪಾಯಿಗಳನ್ನು ಚಾಲ್ತಿಸಾಲ್ ಡಿಸ್ಟ್ರಿಕ್ಟ್ ಫಂಡು ಬಜ್ಜಟ್ಟಿನಲ್ಲಿ II. ಬಿ. ಪಬ್ಲಿಕ್ ವರ್ಕ್ಸ್ ಹೆಡ್ಡಿನಲ್ಲಿ ದಾಖಲಾಗಿರುವ ಮೊಬಲಗು ಪೈಕಿ - ಕೊಡಬಹುದಾಗಿರುತ್ತೆಂತಲೂ, ಅಂದಾಜು ಗೌರ್ನಮೆಂಟಿಗೆ ಮಂಜೂರಿ ಬಗ್ಗೆ ಕಳುಹಿಸಬಹುದೆಂತಲೂ, ಮಂಜೂರಿ ನಿರೀಕ್ಷಣೆ ಮೇಲೆ ಕಾಮಗಾರಿ ಆರಂಭಮಾಡಿಸಬೇಕೆಂತಲೂ ಸಹಾ ತೀರ್ಮಾನಿಸಲಾಯಿತು.

V. ತೋವಿನಕೆರೇಲಿ ಬಂದು ವೈದ್ಯಶಾಲೆ ಸ್ಥಾಪಿಸಬೇಕೆಂತಲೂ, ಆಬ್ಯೆ ತಗಲುವ ಲಾಗೋಡು ಮುಂದಿನಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜಟ್ಟಿನಲ್ಲಿ ದಾಖಲ್ಮಾಡಿಸಬೇಕೆಂತಲೂ ನಮೂದಿರುವ ಮದ್ದಗಿರಿ ಸಬ್ ಡಿವೀಜ್ ಆಫಿಸರವರ 8—10—08ನೆ ಮರುಂ 115ನೆ ನಂಬರು ಯಾದಿಯನ್ನು ಓದಲಾಯಿತು.

ಈ ಐಟಮನ್ನು ಮುಂದಿನಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜಟ್ಟಿನಲ್ಲಿ ದಾಖಲ್ಮಾಡಲು ಮಂಜೂರಾಗಬೇಕಾದ ವಿಚಾರದಲ್ಲಿ ಗೌರ್ನಮೆಂಟಿಗೆ ಬರಸಬೇಕೆಂತ ತೀರ್ಮಾನಿಸಲಾಯಿತು.

VI. ಬಜ್ಜಟ್ಟಿನಲ್ಲಿ ಶಿರಾ ತಾಲ್ಲೂಕಿಗೆ ಕಾಂಗಾರಿಗಳಿಗಾಗಿ ದಾಖಲಾಗಿರುವ ಮೊಬಲಗಿಗೆ ಬಳಪಟ್ಟು ಕೆಲವು ಬಜ್ಜಟ್ಟಿನಲ್ಲಿ ದಾಖಲಾಗದ ಡಿಸ್ಟ್ರಿಕ್ಟ್ ಫಂಡು ಕಾಮಗಾರಿಗಳಿಗಾಗಿ ಹಣ ದಾಖಲ್ಮಾಡಿಸಿ ಮಂಜೂರಿ ಬಗ್ಗೆ ಶಿರಾ ತಾಲ್ಲೂಕು ಅಮಲ್ದಾರ್ರಿಂದ ಕಳುಹಿಸಲ್ಪಟ್ಟ ರೀ ಅಪ್ರೋಪ್ರಿಯೇಷನ್ ತಖ್ತೆಯು ಮದ್ದಗಿರಿ ಸಬ್ ಡಿವೀಜ್ ಆಫಿಸರವರ 5—10—08ನೆ ಮರ್ಕುಂ 104ನೆ ನಂಬರು ಯಾದಿಪಡನೆ ತಲ್ಪಿದ್ದನ್ನು ಓದಲಾಯಿತು.

ತೀರ್ಮಾನ—ಮಂಜೂರ್ಮಾಡಲಾಯಿತು.

VII. ಬಜ್ಜಟ್ಟಿನಲ್ಲಿ ಚಿಕ್ಕನಾಯಿಕನಹಳ್ಳಿ ತಾಲ್ಲೂಕಿಗೆ ಕಾಂಗಾರಿಗಳಿಗಾಗಿ ದಾಖಲಾಗಿರುವ ಮೊಬಲಗಿಗೆ ಬಳಪಟ್ಟು ಕೆಲವು ಬಜ್ಜಟ್ಟಿನಲ್ಲಿ ದಾಖಲಾಗದ ಡಿಸ್ಟ್ರಿಕ್ಟ್ ಫಂಡು ಕಾಮಗಾರಿಗಳಿಗಾಗಿ ಹಣ ದಾಖಲ್ಮಾಡಿಸಿ ಮಂಜೂರಿ ಬಗ್ಗೆ ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಅಮಲ್ದಾರ್ರು ಕಳುಹಿಸಿದ ರೀ ಅಪ್ರೋಪ್ರಿಯೇಷನ್ ತಖ್ತೆಯು ಗುಬ್ಬಿ ಸಬ್ ಡಿವೀಜ್ ಆಫಿಸರವರ 4—11—08ನೆ ಮರ್ಕುಂ 273ನೆ ನಂಬರು ಯಾದಿಯೊಡನೆ ತಲ್ಪಿದ್ದನ್ನು ಓದಲಾಯಿತು.

ತೀರ್ಮಾನ—ಮಂಜೂರ್ಮಾಡಲಾಯಿತು.

VIII. ಸ್ಯ 1908ನೆ ಅಕ್ಟೋಬರ್, ನವಂಬರ್ ಮಾಹೆಗಳಲ್ಲಿ ಮಂಜೂರ್ಮಾಡಲ್ಪಟ್ಟ ಡಿಸ್ಟ್ರಿಕ್ಟ್ ಫಂಡು ಕಾಮಗಾರಿಗಳ ಲಿಸ್ಟುಗಳನ್ನು ಓದಲಾಯಿತು.

ತೀರ್ಮಾನ—ಮಂಜೂರ್ಮಾಡಲಾಯಿತು.

IX. ಚಾಲ್ತಿಸಾಲ್ ಲೋಕಲ್ ಫಂಡ್ಸ್ ಜನರಲ್ ಬಡ್ಜೆಟ್ಟಿನಲ್ಲಿ ಮಂಜೂರಾಗಿರುವ 10,414 ರೂಪಾಯಿಗಳ ಪೈಕಿ ಸನ್ 1908ನೆ ಅಕ್ಟೋಬರ್, ನವಂಬರ್ ಮಾಹೆಗಳಲ್ಲಿ ಮಂಜೂರಾದ ಕಾಂಗಾರಿಗಳ ಲೀಸ್ಟುಗಳನ್ನು ಓದಲಾಯಿತು.

ತೀರ್ಮಾನ—ಮಂಜೂರ್ಮಾಡಲಾಯಿತು.

X. ಭೂವಿ ಮತ್ತು ಜನೋಪಯುಕ್ತವಾದ ಕಾಂಗಾರಿಗಳಿಗಾಗಿ ಲೋಕಲ್ ಫಂಡ್ಸ್ ಜನರಲ್‌ನಿಂದ ಹೊಸದಾಗಿ ಮಂಜೂರಾದ ಹಣದಿಂದ ಮಂಜೂರ್ಮಾಡಲ್ಪಟ್ಟ ಕಾಂಗಾರಿಗಳ ತಖ್ತೆಯನ್ನು ಓದಲಾಯಿತು.

ತೀರ್ಮಾನ—ಮಂಜೂರ್ಮಾಡಲಾಯಿತು.

XI. ತುರ್ವೇಕೆರೆ ಟ್ರಾವಿಲರ್ಸ್ ಬಂಗ್ಲೆಯನ್ನು ದುರಸ್ತು ಪಡಿಸತಕ್ಕ ಬಗ್ಗೆ ಮತ್ತು ಅದನ್ನು ಅಭಿವೃದ್ಧಿಪಡಿಸತಕ್ಕ ಬಗ್ಗೆ ಸಹಾ 1,036 ರೂಪಾಯಿಗಳಿಗೆ ಒಂದು, 602 ರೂಪಾಯಿಗಳಿಗೆ ಒಂದು, ಈ ಮೇರೆ 2 ಅಂದಾಜಾಗಳನ್ನು ಕಾಂಟರ ಸೈನ್ ಬಗ್ಗೆ ಕಳುಹಿಸಿರುವದಾಗಿ ನಮೂದಾದ ತುಮಕೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್‌ಯವರ 17-24—9—08ನೆ ಮಕ್ತುಂ 262ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ—ಮಂಜೂರ್ಮಾಡಲಾಯಿತು.

XII. ಚಳ್ಳಕೆರೆ ಪಾವಗಡ ರಸ್ತೆಯ ಲಾಂಬಿ 19 ಮೈಲಿಗಳು ಮಾತ್ರ ಇರುವದರಿಂದ ಸದರೀ ರಸ್ತೆಯ ಸಾಲಾಬಾದ್ ಕಾಂಗಾರಿಗಾಗಿ ಮಂಜೂರಾಗಿರುವ ಹಣವಲ್ಲಿ 100 ರೂಪಾಯಿಗಳು ಉಳಿಯುತ್ತೆಂತಲೂ ಆ ರೀತಿ ಉಳಿಯುವ ಮೊಬಲಗನ್ನು 3ನೆ ಕ್ಲಾಸು ಟ್ರಾವಿಲರ್ಸ್ ಬಂಗ್ಲಾಗಳ ರಿಪೇರಿಗಾಗಿ ಉಪಯೋಗಿಸಿಕೊಳ್ಳಬಹುದೆಂತಲೂ, ತುಮಕೂರು ಡಿವೀಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಯವರು ಪ್ರಪೋಜ್ ಮಾಡಿದರು.

ಮಂಜೂರ್ಮಾಡಿರುತ್ತೆಂತ ತೀರ್ಮಾನಿಸಲಾಯಿತು.

XIII. ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ವಿಾಟಿಂಗ್ ಸನ್ 1909ನೆ ಇಸವಿ ಫೆಬ್ರವರಿ ಮಾಹೇ 5ನೆ ತಾರೀಖಿನ ದಿವಸ ದಿವಿ 2-30ಕ್ಕೆ ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಕೆ. ದೊರಸ್ವಾಮಿ ಐಯ್ಯರ್,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 27ನೆ ನವಂಬರ್ 1908.

ಚಾಮರಾಜನಗರದ ಮ್ಯುನಿಸಿಪಲ್ ಟೌನಿಗೆ ರಾಮಸಮುದ್ರ ಗ್ರಾಮವನ್ನು ಸೇರಿಸಿ 1906ನೆ ಇಸವಿ VIIನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 8 (1)ನೆ ಪ್ರಕರಣವನ್ನು ಅನುಸರಿಸಿ ಮ್ಯುನಿಸಿಪಾಲಿಟಿಯನ್ನಾಗಿ ಮಾಡಲು ಉದ್ದೇಶಿಸಿ ಇರುವದ್ದರಿಂದ ಈ ಇಸ್ತಿಹಾರು ಮೈಸೂರು ಗೆಜೆಟ್‌ನಲ್ಲಿ ಮೊದಲಾವರ್ತಿ ಫಾಮಿಷಾದ ಎರಡು ತಿಂಗಳುಗಳೊಳಗಾಗಿ ಈ ವಿಷಯದಿಗೆ ಆಕ್ಷೇಪಿಸುವವರೆಲ್ಲಾ ಅಂಥಾ ಆಕ್ಷೇಪಣೆಗಳನ್ನು ಕಾರಣ ಸಹಿತವಾಗಿ ಬರಹನೂಲಕ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೆ ತಿಳಿಸಬೇಕು. ವಿಷಯದಿಸಲು ಉದ್ದೇಶಿಸಿರುವ ಚಾಮರಾಜನಗರದ ಮ್ಯುನಿಸಿಪಾಲಿಟಿಯ ಚತುರ್ಸರ್ಗಳನ್ನು ಸಮಸ್ತರಿಗೂ ತಿಳಿಯಪಡಿಸಲು ಈ ಕೆಳಗೆ ವಿವರಿಸಿ ಇರುತ್ತದೆ.

ಸದರೀ ಮ್ಯುನಿಸಿಪಾಲಿಟಿಯ ಸರಹದ್ದು ಚಾಮರಾಜನಗರಕ್ಕೆ ವಾಯವ್ಯ ದಿಕ್ಕಿನಲ್ಲಿರುವ ನಂಜನಗೂಡು, ಹಾಸನೂರು ಘಾಟ ರಸ್ತೆಯ ಎಡಸಕ್ಕದಲ್ಲಿ ಸರ್ವೆ 23ನೆ ನಂಬರಿನ ಆಗ್ನೇಯ ಮೂಲೆಯಬಳಿ ಪ್ರಾರಂಭವಾಗಿ 24—21—3 ಮತ್ತು 1ನೆ ನಂಬರುಗಳ ದಕ್ಷಿಣ ದಿಕ್ಕಿನ ಬೀಲಿ ಹೊರಗಡೆ ಸರ್ವೆ 1ನೆ ನಂಬರಿನ ಜಮೀನು ಆಗ್ನೇಯ ಮೂಲೆವರಿಗೆ ಬಂದು ಉತ್ತರಕ್ಕೆ ಟಿ. ನರಸೀಪುರದ ರಸ್ತೆ ಕಡೆಗೆ ತಿರುಗಿ ಸರ್ವೆ 1—5—6—7 ಮತ್ತು 13ನೆ ನಂಬರುಗಳ ಪೂರ್ವ ದಿಕ್ಕಿನ ಸರಹದ್ದು ಹೊರಗೆ ಸದರಿ 13ನೆ ನಂಬರು ಜಮೀನಿನ ಉತ್ತರ ಭಾಗದಲ್ಲಿರುವ ಹಳ್ಳದವರೆಗೆ ಹೋಗಿ ಸದರೀ ರಸ್ತೆಯನ್ನು ದಾಟಿ ನಂತರ ಸರ್ವೆ 342 ಮತ್ತು 343ನೆ ನಂಬರುಗಳ ಪಶ್ಚಿಮ ಭಾಗದ ಬೀಲಿಹೊರಗೆ ಸ್ವಲ್ಪದೂರ ಬಂದು ಪೂರ್ವಕ್ಕೆ ತಿರುಗಿ 343—344ನೆ ನಂಬರು ಪೈಕಿ ಟೀಣಿಗೆ ದಕ್ಷಿಣವಾಗಿರುವ ಭಾಗವನ್ನು ಮತ್ತು 354ನೆ ನಂಬರು ಪೈಕಿ ಟೀಣಿಗೆ ದಕ್ಷಿಣವಾಗಿಯೂ ಪಶ್ಚಿಮವಾಗಿಯೂ ಇರುವ ಭಾಗವನ್ನು ಬಳಗೊಂಡು ದಕ್ಷಿಣಕ್ಕೆ ತಿರುಗಿ 356—360—361 ಮತ್ತು 359ನೆ ನಂಬರು ಪೂರ್ತಾ ಜಮೀನುಗಳನ್ನು ಬಳಗೊಂಡು ರಾಮಸಮುದ್ರದ ರಸ್ತೆಗೆ ಸೇರುತ್ತದೆ. ಅಲ್ಲಿಂದ ಪೂರ್ವಕ್ಕೆ ರಾಮಸಮುದ್ರದ ರಸ್ತೆಗೆ ಉತ್ತರ ಭಾಗದಲ್ಲಿರುವ ಚಾಮರಾಜನಗರದ ಗ್ರಾಮದ ಸರ್ವೆ 358—412—298—296—295 ಮತ್ತು ರಾಮಸಮುದ್ರ ಗ್ರಾಮದ ಸರ್ವೆ 613 ಈ ನಂಬರು ಜಮೀನುಗಳ ದಕ್ಷಿಣ ದಿಕ್ಕಿನ ಬೀಲಿ ಹೊರಗಿನಿಂದ ಬಂದು ಸರ್ವೆ 612—618—619—620—629—623 ಈ ನಂಬರುಗಳನ್ನು ಮತ್ತು 623—624ನೆ ನಂಬರುಗಳ ಮಧ್ಯೆ ಇರುವ ಟೀಣಿಯನ್ನು ಸರ್ವೆ 624—625ನೆ ನಂಬರುಗಳನ್ನು ಬಳಗೊಂಡು 626ನೆ ನಂಬರಿನ ಪೂರ್ವ ದಿಕ್ಕಿನ ಬೀಲಿಹೊರಗೆ ಉತ್ತರಕ್ಕೆ ತಿರುಗಿ 652ನೆ ನಂಬರಿನ ದಕ್ಷಿಣ ಭಾಗದ ಬೀಲಿ ಹೊರಗೊಂಡು 661ನೆ ನಂಬರಿನ ಪಶ್ಚಿಮ ದಿಕ್ಕಿನ ಬೀಲಿಹೊರಗೆ ಸ್ವಲ್ಪದೂರವೂ ದಕ್ಷಿಣ ದಿಕ್ಕಿನ ಬೀಲಿಯಲ್ಲಿ ಪೂರ್ತಾ ನಂಬರು 662ನೆ ನಂಬರು ಬಳಗೊಂಡು ದಕ್ಷಿಣೋತ್ತರವಾಗಿ ಇರುವ ಟೀಣಿಗೆ ಅಡ್ಡಲಾಗಿ ಬಂದು ಸರ್ವೆ 1ನೆ ನಂಬರಿನ ಪಶ್ಚಿಮ ಮತ್ತು